## ಕವಿತೆ

ಶುಕಪಿಕಗಳು ಬಾಯ್ದೆರೆದು ಧ್ವನಿಗೂಡಿಸಿ ಹಾಡಲು
ಮಾವು ಹಲಸು ಕಾಡು ಮೇಡು ಹೊಸ ಹೂವ ಅರಳಿಸಲು ||
ಅಯ್ಯ ಕೈಯ ಚಿಗುರೆಯು ಚಂಗನೆ ಹಾರಿದಂತೆ
ಅಮ್ಮನವರ ವಾಹನವು ಆಕಳಿಸಿತು ಲಯದಂತೆ ||

ಪರಮಶಿವನ ಆವಾಸ ನಿತ್ಯವು ಮಧುಮಾಸ
ಶಂಕರನ ಪರಮಾರ್ಥ ಲೋಕವು ಕಲ್ಯಾಣಾರ್ಥ||
ತಿರಿಕಟ್ಟಿಕೊಂಡ ಜಟೆಯು ಬಿಳಿಲಾಗಿ ಊಗುವಂಗೆ
ಹುಡುಗಾಟದ ಕನ್ನೆಗಂಗೆ ಉಯ್ಯಾಲೆ ಆಡುವಂಗೆ ||

ತೂಗೋ ವೇಗಕೆ ಸೆರಗು ಗಾಳಿಯಲ್ಲಿ ತೇಲುವಂಗೆ
ಮಾರುದ್ದ ರಂಬೆ ಕೊನೆಗೆ ಸೆರಗು ಸಿಕ್ಕಿಕೊಂಡಂಗೆ ||
ನಾಚಿಕೊಂಡು ತನ್ನ ಕರದಿ ಎದೆ ಮುಚ್ಚಿಕೊಂಡಂಗೆ
ರುದ್ರಾಕ್ಷಿ ಮರೆಯಲಿ ಹರ ತುಂಟ ನಗುವ ನಗುವಂಗೆ ||

ಕೃಷ್ಣನಾ? ಈಶನಾ? ನಿಜವನೇಳು ಲಿಂಗಾ
ಕರವೆತ್ತಿ ಮುಗಿದವಳೆ ಗೋಪಿಕೆ ತರ ಗಂಗಾ ||
ಎಳೆಹುಣ್ಣಿಮೆ ನವಿಲು ಕಣ್ಣು ಸೋಗಯಿಸಿ ಬಂದಂಗೆ
ಡಮರುಗವೆ ಬೆಣ್ಣೆಮುದ್ದೆ ರೂಪ ತಳೆದು ಕಂಡಂಗೆ ||

ನಂದಿ ವಾಹನ – ಗೋವುಹೋಲಿಕೆಯು ಕಂಡಂಗೆ
ಹುಲಿ ಚರ್ಮದ ಉಡುಗೆಯು ಪೀತಾಂಬರವಾದಂಗೆ ||
ಶಿವನ ಉರಿಗಣ್ಣು ತಿಲಕವಾಗಿ ಕಂಡಂಗೆ
ನಾಗಮಣಿ ಕೌಸ್ತುಭವು ಹೊಳೆಯುತಾ ಇರುವಂಗೆ ||

ಅಲೆಅಲೆಗಳು ಕನಸಾಯ್ತು ಕಣ್ಣು ಮುಚ್ಚಿಕೊಂಡರೆ
ಹೃದಯವೇ ತೇಲಿದಂತೆ ಪ್ರೇಮದಲ್ಲಿ ಮುಳುಗಿರೆ ||
ತಿಂಡಿಯಿಲ್ಲ ತಿನಿಸಿಲ್ಲ ಉಪವಾಸ ಮಾಡಿದಂತೆ
ಕಣ್ಣರೆಪ್ಪೆ ಜಾರುತಿಲ್ಲ ಜಾಗರವನು ಮಾಡಿದಂತೆ ||

ಬಾಳೆಲ್ಲಾ ಶಿವರಾತ್ರಿ ಇವನ ದೆಸೆಯಿಂದಾಗಿ
ಬಾಯಾರಿ ಹೋಯಿತಲ್ಲ ನಾ ಏನು ಮಾಡಲೀಗ ||
ಅನುಕ್ಷಣ ನಿಂದೆ ಧ್ಯಾನ ಜ್ವರ ಕೆಡವಿಕೊಂಡಂಗೆ
ಮದ್ದು ಗಿದ್ದಿಗು ಬಗ್ಗದು ವರಪಡೆದು ಬಂದಂಗೆ ||

